**ದಿನಾಂಕಃ 14-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು: ಪಿರ್ಯಾದುದಾರರ ಪರ ವಕೀಲರಿಂದಃ**

1) ನಾನು ಮೂಡಲಗಿ ತಾಲೂಕಿನ ತುಕ್ಕಾನಟ್ಟಿ ಗ್ರಾಮದ ಖಾಯಂವಾಸಿಯಾಗಿರುತ್ತೇನೆ ಎಂದರೆ ಸರಿ. ಪಿರ್ಯಾದುದಾರರು ಮೂಡಲಗಿ ತಾಲೂಕಿನ ಕಲ್ಲೋಳಿ ಗ್ರಾಮದವರು ಎಂದರೆ ಸರಿ. ಸದರಿ ತುಕ್ಕಾನಟ್ಟಿ ಮತ್ತು ಕಲ್ಲೋಳಿ ಗ್ರಾಮಗಳು ಒಂದಕ್ಕೊಂದು ಹೊಂದಿಕೊಂಡು ಇರುತ್ತವೆ ಎಂದರೆ ಸರಿ. ನನ್ನ ಮೂಲ ಉದ್ಯೋಗ ಒಕ್ಕಲುತನ ಆಗಿರುತ್ತದೆ ಎಂದರೆ ಸರಿ. ಅದೇ ರೀತಿ ಪಿರ್ಯಾದುದಾರರ ಮೂಲ ಉದ್ಯೋಗ ಒಕ್ಕಲುತನ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದುದಾರರು ಆರ್ಥಿಕವಾಗಿ ಸಬಲರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಆರ್ಥಿಕ ಪರಿಸ್ಥಿತಿ ತಕ್ಕ ಮಟ್ಟಿಗೆ ಇರುತ್ತದೆ ಎಂದರೆ ಸರಿ. ನಾನು ಕಲ್ಲೋಳಿ ಗ್ರಾಮದ ಶಂಕರ ಪಾಟೀಲ ರವರ ಜಮೀನಿನಲ್ಲಿ ರೈತ ನಾತೆಯಿಂದ ಒಕ್ಕಲುತನ ಮಾಡುತ್ತಿದ್ದೇನೆ ಎಂದರೆ ಸರಿ. ಅದೇ ರೀತಿ ಪಿರ್ಯಾದುದಾರರು ಸಹ ಸದರಿಯವರ ಜಮೀನಿನಲ್ಲಿ ರೈತ ನಾತೆಯಿಂದ ಒಕ್ಕಲುತನ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ಸದರಿಯವರ ಜಮೀನಿನಲ್ಲಿ 4-5 ವರ್ಷದಿಂದ ಒಕ್ಕಲುತನ ಮಾಡುತ್ತಿದ್ದೇನೆ. ನನ್ನ ಹಾಗೂ ಶಂಕರಗೌಡ ಪಾಟೀಲ ರವರ ನಡುವೆ ಲಾವಣಿಗೆ ಸಂಬಂಧಿಸಿದಂತೆ ಯಾವುದೇ ಕರಾರು ಪತ್ರ ಆಗಿರುವುದಿಲ್ಲ. ನಾನು ಪಿರ್ಯಾದುದಾರರಿಂದ 2023 ನೇ ಸಾಲಿನ ಮೊದಲು

ಎರಡು ಬಾರಿ ಕೈಗಡ ಸಾಲವನ್ನು ಪಡೆದುಕೊಂಡು ಮರಳಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಎಪ್ರೀಲ್ 2023 ರ ಮೊದಲ ವಾರದಲ್ಲಿ ಪಿರ್ಯಾದುದಾರರಿಗೆ ನನ್ನ ಕುಟುಂಬದ ಅಡಚಣೆ ಸಲುವಾಗಿ ರೂ. 4,00,000/- ಕೈ ಸಾಲವನ್ನು ನೀಡುವಂತೆ ವಿನಂತಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮೊದಲ ವಾರದಲ್ಲಿ ನನಗೆ ಪಿರ್ಯಾದುದಾರರು ರೂ. 3,00,000/-ಕೈಗಡ ಸಾಲವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಮೂರನೇ ವಾರದಲ್ಲಿ ರೂ. 1,00,000/-ಕೈಗಡ ಸಾಲವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಾನು ಪಡೆದ ಕೈಗಡ ಸಾಲವನ್ನು 6 ತಿಂಗಳ ಒಳಗಾಗಿ ಹಿಂದಿರುಗಿಸುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರಿಂದ ಹಣ ಪಡೆದಿದ್ದರೂ ಸಹ, ಅವರಿಗೆ ಹಣವನ್ನು ಮರಳಿ ನೀಡಬಾರದೆಂಬ ಉದ್ದೇಶದಿಂದ, ಪಡೆದಿರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2) ನಾನು ಡಿಸಿಸಿ ಬ್ಯಾಂಕ, ಕಲ್ಲೋಳಿ ಶಾಖೆಯಲ್ಲಿ ಖಾತೆ ಹೊಂದಿರುತ್ತೇನೆ ಎಂದರೆ ಸರಿ. ಸದರಿ ಬ್ಯಾಂಕಿನವರು ನನಗೆ ಚೆಕಬುಕ್ ನೀಡಿರುತ್ತಾರೆ ಎಂದರೆ ಸರಿ. ನಾನು ಪಿರ್ಯಾದುದಾರರಿಂದ ಪಡೆದಿರುತ್ತೇನೆ ಎನ್ನಲಾಗುವ ಹಣವನ್ನು ಹಿಂದಿರುಗಿಸಲು ಕೇಳಿದಾಗ ಅವರನ್ನು ಮನೆಗೆ ಕರೆದು ದಿಃ 28-02-2024 ರಂದು ರೂ. 4,00,000/- ಗಳ ಚೆಕ್ಕನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು

ಪಿರ್ಯಾದುದಾರರು ಅವರ ಗೋಕಾಕ ಶಾಖೆಯ ಬ್ಯಾಂಕಿನಲ್ಲಿ ದಿಃ 02-03-2024 ರಂದು ನಗದೀಕರಿಸಲು ಹಾಜರು ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 04-03-2024 ರಂದು ಸದರಿ ಹಾಜರು ಪಡಿಸಿದ ಚೆಕ್ಕನ್ನು ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಮರಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 02-03-2024 ರಂದು ನನ್ನ ಸದರಿ ಖಾತೆಯಲ್ಲಿ ಹಣ ಇರಲಿಲ್ಲ. ಸದರಿ ಪ್ರಶ್ನಿತ ಚೆಕ್ ಅಮಾನ್ಯಗೊಂಡ ಬಗ್ಗೆ ಪಿರ್ಯಾದುದಾರರು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಪಿರ್ಯಾದುದಾರರಿಗೆ 10-12 ದಿನಗಳ ಕಾಲಾವಕಾಶ ಕೇಳಿದ್ದೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ನನಗೆ ಸದರಿ ಕಾಲಾವಕಾಶದ ನಂತರ ವಕೀಲರ ಮುಖಾಂತರ ನೋಟಿಸು ಕಳುಹಿಸಿದ್ದರು ಎಂದರೆ ಸರಿ.

3) ನಿಪಿ-1 ಚೆಕ್ಕು ನನಗೆ ಸಂಬಂಧಿಸಿದ್ದಾಗಿದ್ದು ಅದರಲ್ಲಿರುವ ಸಹಿ ನನ್ನದಾಗಿರುವುದಿಲ್ಲ. ನನಗೆ ಬಂದ ನೋಟಿಸನ್ನು ನಾನು ಸಹಿ ಮಾಡಿ ಪಡೆದಿರುತ್ತೇನೆ. ನಿಪಿ-5 ರ ಮೇಲಿರುವ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿಗೆ ಅವರು ಸಲ್ಲಿಸಿರುವ ವಕಾಲತ ಮೇಲಿರುವ ಸಹಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ಸಹಿ ತಮ್ಮದೆ ಎಂದು ನುಡಿಯುತ್ತಾರೆ. ನಾನು ನನ್ನ ಸಹಿಯನ್ನು ಬಾಳಪ್ಪಾ ಶಿ. ಹುಲಕುಂದ ಎಂದು ಕನ್ನಡದಲ್ಲಿಯೇ ಸಹಿ ಮಾಡುತ್ತೇನೆ ಎಂದರೆ ಸರಿ. ನಿಪಿ-1 ರಲ್ಲಿರುವ ಸಹಿ ನನ್ನದೇ

ಆಗಿದ್ದರೂ ಸಹ ಅದು ನನ್ನದಲ್ಲ ಎಂದು ದುರುದ್ದೇಶದಿಂದ ಅಲ್ಲಗಳೆಯುತ್ತಿದ್ದೇನೆ ಎಂದರೆ ಸರಿಯಲ್ಲ.

4) ವಕೀಲರಿಂದ ನನಗೆ ಬಂದ ನೋಟಿಸಿಗೆ ಪ್ರತ್ಯುತ್ತರ ನೀಡಲು ತೊಂದರೆ ಇರಲಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಶಂಕರಗೌಡ ಪಾಟೀಲರವರಿಗೆ ಭದ್ರತೆಗಾಗಿ ಪ್ರಸ್ತುತ ಪ್ರಕರಣದ ಚೆಕ್ಕನ್ನು ನೀಡಿದ್ದೆ ಎನ್ನುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಸದರಿ ಶಂಕರಗೌಡ ಪಾಟೀಲರವರಿಗೆ ನೀಡಿದ್ದ ಚೆಕ್ಕನ್ನು ಪ್ರಸ್ತುತ ಪಿರ್ಯಾದುದಾರರು ಅಕ್ರಮವಾಗಿ ಹಣ ಪಡೆಯುವುದಕ್ಕಾಗಿ ದುರುಪಯೋಗ ಪಡಿಸಿಕೊಂಡು ಕೇಸು ಹಾಕಿರುತ್ತಾರೆ ಎಂದು ಸದರಿಯವರಿಬ್ಬರ ವಿರುದ್ಧ ನಾನು ಯಾವುದೇ ದೂರನ್ನು ದಾಖಲಿಸಿರುವುದಿಲ್ಲ, ಕ್ರಮವನ್ನು ಕೈಗೊಂಡಿರುವುದಿಲ್ಲ. ಪಿರ್ಯಾದುದಾರರಿಗೆ ಹಣ ಮರಳಿ ನೀಡುವ ಭಾಧ್ಯತೆಯಿಂದ ತಪ್ಪಿ ಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–1 ರ ಚೆಕ್ಕನ್ನು ನಾನೇ ಬರೆಯಿಸಿ ಸಹಿ ಮಾಡಿ ಪಿರ್ಯಾದುದಾರರಿಗೆ ನೀಡಿದ್ದರೂ ಸಹ ನಾನು ನೀಡಿರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5) ಸೋಮಪ್ಪಾ ರಾಮಪ್ಪಾ ಹುಲಕುಂದ ರವರು ನನ್ನ ಸಹೋದರನಾಗಿದ್ದು, ಅವರು ಗೋಕಾಕ ಹಾಗೂ ತುಕ್ಕಾನಟ್ಟಿಯಲ್ಲಿ ವಾಸವಿರುತ್ತಾರೆ. ಅದೇ ರೀತಿ ಪುಂಡಲೀಕ ರಾಮಪ್ಪಾ ನಾಯಕರವರು ಸಹ ತುಕ್ಕಾನಟ್ಟಿ ಗ್ರಾಮದ ವಾಸಿಯಾಗಿರುತ್ತಾರೆ ಎಂದರೆ

ಸರಿ. ಸದರಿಯವರಿಬ್ಬರೂ ನನ್ನ ಆತ್ಮೀಯರು ಎಂದರೆ ಸರಿ. ನಾನು ಪಿರ್ಯಾದುದಾರರಿಗೆ ಖಾತೆಯಲ್ಲಿ ಸಮರ್ಪಕವಾದ ಹಣವನ್ನು ಇರಿಸದೇ ಚೆಕ್ಕನ್ನು ನೀಡಿ ಅದು ಅಮಾನ್ಯವಾಗುವಂತೆ ಮಾಡಿ, ಅವರಿಗೆ ಹಣ ಹಿಂದಿರುಗಿಸದೆ ಅಪರಾಧ ಎಸಗಿ, ಅದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ**

( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.& ನ್ಯಾದಂ., ಗೋಕಾಕ.